(ಬ) ಕೆಲವು ರಾಜಕೀಯ ಪ್ರಮುಖರ ಭೂಮಿಗೆ ನೀರು ಹರಿಯುವ ತೂಬುಗಳನ್ನು ಬಹು ಆಸಕ್ತಿಯಿಂದ ನೋಡಿಕೊಳ್ಳುತ್ತ ಅವರ ಭೂಮಿಗೆ ನೀರು ಹಾಯಿಸುವ ಶ್ರಮವನ್ನು ವಹಿಸುವುದು. ಸಣ್ಣ ಪುಟ್ಟ ರೈತರು ತಮ್ಮ ಭೂಮಿಗೆ ನೀರು ಬಂದಿಲ್ಲವೆಂದರೆ ಬಾಯಿಗೆ ಬಂದಂತೆ ಬೈದು ಕಳುಹಿಸುವುದು.

(ಅ) ನಾಲೆಗಳಲ್ಲಿ ಬರುವ ತೂಬುಗಳನ್ನು ಬೇಕೆಂದವರಿಗೆ ವಿಸ್ತರಿಸಿಕೊಡುವುದು. ಬೇಡಿಕೆ ಇರುವೆಡೆ ರೈತರು ಒತ್ತಾಯಿಸಿದರೆ ತೂಬನ್ನು ಹೊಡೆದು ಹಾಕಲು ಯತ್ನಿಸುವರೆಂದು ಪೋಲೀಸ್ ದೂರು ಕೊಟ್ಟು ಕಿರುಕುಳವನ್ನು ಉಂಟು ಮಾಡುವುದು. ಇದಕ್ಕೆ ಉದಾಹರಣೆ ವಾಣಿವಿಲಾಸಪುರದಲ್ಲಿ ೨೦ ಜನ ರೈತರ ಮೇಲಿರುವ ಮೊಕ್ಕದ್ದಮೆ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಹಾಗೆ ಹೇಳುತ್ತೇನೆ.

೭ (ಬಿ) ಹುಕ್ಕೇರಿ ತಾಲ್ಲೂಕಿನ ಶಿಪ್ಪೂರ್ ಗ್ರಾಮದಲ್ಲಿ ದುಷ್ಕರ್ಮಿಗಳಿಂದ ಶ್ರೀ ಪರಸುಬಾಳಂ ಶಿಂಧೆ ಎಂಬುವರ ಹತ್ಯೆ

ಶ್ರೀ ಮಲ್ಲಪ್ಪಗೌಡ ಎಸ್. ಪಾಟೀಲ್ (ಸಂಕೇಶ್ವರ),—ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಶಿಪ್ಪೂರ್ ಗ್ರಾಮದಲ್ಲಿ ದಿನಾಂಕ ೨೭.೧-೮೭ ರಂದು ರಾತ್ರಿ ಕೆಲವೊಂದು ದುಷ್ಕರ್ಮಿಗಳಿಂದ ಶ್ರೀ ಪರಸುಬಾಳು ಶಿಂಧೆ, ಸಾರಾಯಿ ಅಂಗಡಿಯ ಮಾಲೀಕನ ಹತ್ಯೆ ಮಾಡಿ ತದನಂತರ ಅವನ ಗುಡಿಸಲಿಗೆ ಬೆಂಕಿ ಹಚ್ಚಿ ಅದರಲ್ಲಿ ಅವನು ಮೃತಪಟ್ಟಿದ್ದಾನೆಂದು ಜನರಿಗೆ ಕಾಣುವಂತೆ ಮಾಡಿರುತ್ತಾರೆ.

ನಿರ್ಮಾನಿಯಾಗಿ ಸಾರಾಯಿ ಅಂಗಡಿ ನಡೆಸುತ್ತಿರುವ ಶ್ರೀ ಪರಸುಬಾಳು ಶಿಂಧೆ ಈತನ ದುರ್ಮರಣದ ಬಗ್ಗೆ ಸಂಪೂರ್ಣ ತನಿಖೆ ಮಾಡುವಂತೆ ಸಾರ್ವಜನಿಕರು ಒತ್ತಾಯಿಸಿರುತ್ತಾರೆ. ಸ್ಥಳೀಯ ರಾಜಕಾರಣಿಗಳಿಂದ ಪೋಲೀಸ್ ಇಲಾಖೆಯ ಮೇಲೆ ದಬ್ಬಾಳಿಕೆ ಬಂದಿದ್ದು ಪೋಲೀಸ್ ಅಧಿಕಾರಿಗಳು ನಿಷ್ಕ್ರಿಯ ಮನೋಭಾವ ತಾಳಿರುತ್ತಾರೆ.

ಕರ್ನಾಟಕ–ಮಹಾರಾಷ್ಟ್ರದ ಗಡಿಯಲ್ಲಿರುವ ಈ ಊರಿಗೆ ಯೋಗ್ಯ ನ್ಯಾಯ ದೊರಕಿಸಿ ಕೊಡುವಂತೆ ಜನರ ಪರವಾಗಿ ಸರಕಾರವನ್ನು ಒತ್ತಾಯಿಸುತ್ತೇನೆ. ಹಾಗೂ ಈ ದುರ್ಮರಣದ ಸಮಗ್ರ ತನಿಖೆಯನ್ನು ಸಿ. ಓ.ಡಿ. ಯಿಂದ ನಡೆಸಿ ತಪಸ್ಥರನ್ನು ಕೂಡಲೇ ಬಂಧಿಸಬೇಕಾಗಿ ಕೇಳಿ ಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನನಗೆ ವರದಿ ಬಂದಿದೆ. ಈ ವರದಿಯ ಪ್ರಕಾರ ಈತನು ತಾನಾಗಿಯೇ ಬೆಂಕಿ ಹಚ್ಚಿಕೊಂಡು ಸತ್ತಿದ್ದಾನೆಂದು ವರದಿ ಬಂದಿದೆ. ಈ ಬಗ್ಗೆ ಪೋಸ್ಟ್‌ಮಾರ್ಟಮ್ ಮಾಡಿಸಿ ವರದಿ ಕಳುಹಿಸಿಕೊಟ್ಟಿದ್ದಾರೆ. ವಿಸೆರಾ ಅನ್ನು ಫೊರೆನಿಕ್ಸ್ ಲ್ಯಾಬೋರೆಟರಿಗೆ ಕಳುಹಿಸಿ ಕೊಟ್ಟಿದ್ದೇವೆ. ಈ ಪ್ರಕರಣವನ್ನು ಸಿ.ಒ.ಡಿ.ಗೆ ರೆಫರ್ ಮಾಡುವುದು ಸೂಕ್ತ ಎನಿಸುತ್ತದೆ. ಆದ್ದರಿಂದ ಇದನ್ನು ಅವರಿಗೆ ರೆಫರ್ ಮಾಡಿ ಸೂಕ್ತ ತನಿಖೆ ಮಾಡಿಸುತ್ತೇನೆ.

(ಅ) ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗಲು ಉಡುಪಿಯಿಂದ ರಾಮನಗರಕ್ಕೆ ಸೆಮಿ-ಲಗ್ಸುರಿ ಬಸ್ ಹಾಕುವ ಬಗ್ಗೆ

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಸಾವಿರಾರು ರೇಷ್ಮೆ ಬೆಳೆಗಾರರಿದ್ದು ತಾವು ಬೆಳೆದ ರೇಷ್ಮೆಗೂಡಿಗೆ ಉತ್ತಮ ಬೆಲೆಗಾಗಿ ರಾಮನಗರ ರೇಷ್ಮೆ ಮಾರುಕಟ್ಟೆಗೆ ಕೊಂಡು ಹೋಗಿ ಅದನ್ನು ಮಾರಬೇಕಾಗುತ್ತದೆ. ಉಡುಪಿಯಿಂದ ಸಂಜೆ ೭ ಗಂಟೆಗೆ ಬಿಡುವ ಉಡುಪಿ–ಮೈಸೂರು–ಬೆಂಗಳೂರು ಬಸ್ಸು ರಾಮನಗರವನ್ನು ಹಾದು ಬೆಂಗಳೂರಿಗೆ ಹೋಗುವಾಗ ಈತನಕ ರಾಮನಗರದಲ್ಲಿ ನಿಲ್ಲದೆ ಸೀದಾ ಬೆಂಗಳೂರಿಗೆ ಹೋಗುವುದರಿಂದ ರೇಷ್ಮೆ ಬೆಳೆಗಾರರು ಮಂಡ್ಯದಲ್ಲಿ ಅಥವಾ ಬೆಂಗಳೂರಿನಲ್ಲಿ ರೇಷ್ಮೆಗೂಡನ್ನು ಇಳಿಸಿ ಪುನಃ ರಾಮನಗರಕ್ಕೆ ಹೋಗಬೇಕಾಗುತ್ತದೆ. ನಮ್ಮ ಜಿಲ್ಲೆಯ ರೇಷ್ಮೆ ಬೆಳೆಗಾರರಿಗಾಗುವ ಅನಾನುಕೂಲತೆಯನ್ನು ತಪ್ಪಿಸಲು ಉಡುಪಿಯಿಂದ ರಾಮನಗರದಲ್ಲಿ ನಿಲ್ಲುವಂತೆ ಸೆಮಿಲಕ್ಸುರಿ ಬಸ್ ವ್ಯವಸ್ಥೆಯನ್ನು ಮಾಡಬೇಕೆಂದು ಸದನದ ಮೂಲಕ ಸಂಬಂಧಪಟ್ಟ ಸಾರಿಗೆ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.